ನೀವೆಟಿಗೆ

ವಾರಪತ್ರಿಕೆ, ಸಂಪಾದಕ: ಸಿರಿಮನೆ ನಾಗರಾಜ್

ಪ್ರಾಯೋಗಿಕ ಸಂಚಿಕೆ ೫ | ಕೊಪ್ಪ ೭-೨-೧೯೮೨ ಭಾನುವಾರ | ಖಾಸಗಿ ಪ್ರಸಾರಕ್ಕಾಗಿ

ಸೌದೆ; ರೈತರ ವಿಶಿಷ್ಟ ಪ್ರತಿಭಟನೆ

ರೈತನ ಜೀವನದ ಅನಿವಾರ್ಯ ಅವಶ್ಯಕತೆಯಾದ ಸೌದೆಯನ್ನು ಸ್ವಂತ ಬಳಕೆಗಾಗಿ ಕಾಡಿನಿಂದ ಒಟ್ಟು ಮಾಡಿಕೊಂಡು ತರಲು ನಿಗದಿತ ಶುಲ್ಕ ಪಡೆದು ಲೈಸೆನ್ಸ್ ನೀಡುವಂತೆ ಹಾಗೂ ಈ ಸಂಬಂಧದಲ್ಲಿ ಲಂಚ ಮತ್ತು ಕಿರುಕುಳ ತಪ್ಪಿಸುವಂತೆ ಒತ್ತಾಯಿಸಿ ಚಿಕ್ಕಮಗಳೂರಿನಲ್ಲಿ ರೈತರು ಫೆ. 1 ರಂದು ವಿಶಿಷ್ಟ ರೀತಿಯಲ್ಲಿ ಪ್ರತಿಭಟನೆ ನಡೆಸಿದ್ದಾಗಿ ಚಿಕ್ಕಮಗಳೂರಿನ 'ಜನಮಿತ್ರ' ದಿನಪತ್ರಿಕೆ ವರದಿ ಮಾಡಿದೆ.

ಪರವಾನಗಿ ಇಲ್ಲದೆ ಸೌದೆ ತರುತ್ತಿದ್ದ 35 ಕ್ಕೂ ಹೆಚ್ಚು ಗಾಡಿಗಳನ್ನು ಅರಣ್ಯ ಇಲಾಖೆ ಸಿಬ್ಬಂದಿ ರಾಮನಹಳ್ಳಿ ಬಳಿ ತಡೆದರು. ಸಿಟ್ಟಿಗೆದ್ದ ರೈತರು ಅವರನ್ನು ಧಿಕ್ಕರಿಸಿ ಚಿಕ್ಕಮಗಳೂರಿನ ಹನುಮಂತಪ್ಪ ಸರ್ಕಲ್ ಬಳಿ ತಮ್ಮ ಭರ್ತಿಗಾಡಿಗಳನ್ನು ಬಿಚ್ಚಿ ಸಂಜೆ 6ರಿಂದ ವಾಹನಸಂಚಾರ ಸ್ಥಗಿತಗೊಳಿಸಿದರು. ನೋಡುನೋಡುತ್ತಿದ್ದಂತೆ ಸುಮಾರು 200 ಗಾಡಿಗಳು [illegible] ಲ್ಲಿ ಜಮಾಯಿಸಿದವು.

ಪೋಲೀಸ್ ಮತ್ತು ಅರಣ್ಯ ಇಲಾಖೆಗಳ ಕೆಳಹಂತದ ಅಧಿಕಾರಿಗಳು ರೈತರ ಮನ ಒಲಿಸಲು ಸೋತಾಗ ಅವರ 'ಹಿರಿಯರು' ಬಂದರು. ರೈತರ ಅಹವಾಲು ಕೇಳಿ ಕನಿಷ್ಠ ದ [illegible] ಹಾಕಲು ಡಿ.ಎಫ್.ಓ. ಒಪ್ಪಿಕೊಂಡ ನಂತರವೇ ರೈತರು ಜಾಗ ತೆರವು [illegible]ದರು. ಇಷ್ಟಾಗುವಾಗ ರಾತ್ರಿ 8–35.

"[illegible]ಮಂತ ಟಿಂಬರ್ ವ್ಯಾಪಾರಿಗಳು [illegible] ಅರಣ್ಯಗಳನ್ನು ಲೂಟಿ ಹೊಡೆ[illegible]ವಾಗ, ಕಾಡಿನಲ್ಲಿ ಬಿದ್ದ ಒಣ [illegible]ನ್ನು ಒಟ್ಟು ಮಾಡಿಕೊಂಡು ತರ[illegible] ರೈತರಿಗೆ ಲೈಸೆನ್ಸ್ ನೀಡದಿರುವ" [illegible] ನೀತಿಯನ್ನು ಖಂಡಿಸಿದ ರೈತರು [illegible]ನಿಂದ ರೈತರಿಗೂ ತೊಂದರೆ, [illegible]ಕ್ಕೂ ಲಾಭವಿಲ್ಲ; ಅರಣ್ಯ ಇಲಾಖೆ [illegible]ದ ಸಿಬ್ಬಂದಿಗೆ ಮಾತ್ರ ಲಂಚ [illegible] ದಾರಿಯಾಗುತ್ತದೆ ಎಂದು ತಿ[illegible]ವಾಗಿ 'ಜನಮಿತ್ರ' ಹೇಳಿದೆ.

ಸಹಕಾರಿ ನೌಕರರ ಮುಷ್ಕರ

ಶೃಂಗೇರಿ: ಸಹಕಾರ ಸಂಘಗಳಿಗೆ ಸಂಬಂಧಿಸಿದ ಕೆ. ಹೆಚ್. ಪಾಟೀಲ್ ಸಮಿತಿಯ ಶಿಫಾರ್ಸಿನಲ್ಲಿರುವ 129 (2) (ಬಿ) ಮತ್ತು 128 (ಎ) ಭಾಗಗಳನ್ನು ತೆಗೆದುಹಾಕಿರುವುದನ್ನು ಹಾಗೂ 149 (1) (2)ರ ಅಳವಡಿಕೆಯನ್ನು ವಿರೋಧಿಸಿ ಹಾಗೂ ತಮ್ಮ ನ್ಯಾಯವಾದ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಫೆ. 1 ರಿಂದ ಅನಿರ್ದಿಷ್ಟ ಕಾಲದ ಮುಷ್ಕರ ಪ್ರಾರಂಭಿಸಿರುವ ಈ ತಾಲೂಕಿನ ಎಲ್ಲ ಸಹಕಾರ ಸಂಘಗಳ ನೌಕರರು ಶೃಂಗೇರಿಯಲ್ಲಿ ಅಂದು ಮೆರವಣಿಗೆ ನಡೆಸಿ, ತಹಸೀಲ್ದಾರ್ ಮತ್ತು ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಗಳಿಗೆ ಮನವಿಪತ್ರ ಸಲ್ಲಿಸಿದರು.

ತಾ|ಪ್ರಾಥಮಿಕ ಸಹಕಾರಿ ಭೂ ಅಭಿವೃದ್ಧಿ ಬ್ಯಾಂಕ್, ತಾ. ವ್ಯ. ಮಾ. ಸ. ಸಂಘ ಮತ್ತು ವ್ಯವಸಾಯ ಸೇವಾ ಸಹಕಾರ ಸಂಘ ಇವುಗಳ ನೌಕರರು ಮುಷ್ಕರದಲ್ಲಿ ಭಾಗವಹಿಸಿದ್ದಾರೆಂದು ನೌಕರರ ಜಂಟಿ ಕ್ರಿಯಾಸಮಿತಿಯ ಅಧ್ಯಕ್ಷರು ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ಸಹಕಾರ ಸಂಘಗಳ ನೌಕರರ ಜಂಟಿಕ್ರಿಯಾಸಮಿತಿ ಈ ಮುಷ್ಕರಕ್ಕೆ ಕರೆ ಕೊಟ್ಟಿದೆ.

ತಲಮಕ್ಕಿ ಗ್ರಾಮಪಂಚಾಯ್ತಿ ಕಂದಾಯ ವಸೂಲಿ ಪೂರ್ಣ

ಕೊಪ್ಪ: ಈ ತಾಲೂಕಿನ ತಲಮಕ್ಕಿ ಗ್ರಾಮ ಪಂಚಾಯ್ತಿಯು ತನ್ನ ಕಂದಾಯ ವಸೂಲಿಯನ್ನು ಡಿಸೆಂಬರ್ 31 ರೊಳಗೇ ನೂರಕ್ಕೆ ನೂರರಷ್ಟು ಪೂರೈಸಿ, ಸರ್ಕಾರದಿಂದ ಶೇ. 100 ರಷ್ಟು ಮ್ಯಾಚಿಂಗ್ ಗ್ರಾಂಟ್‌ಗೆ ಪಾತ್ರವಾಗಿದೆ.

ಈ ಸಾಧನೆ ಮಾಡಿರುವ ಗ್ರಾಮ ತಾಲೂಕಿಗೆ ಇದೊಂದೇ ಎಂದು ತಿಳಿದು ಬಂದಿದೆ.

ಸಹಚಿಂತನ ಕಾರ್ಯಕ್ರಮ

ಕೊಪ್ಪ: ಫೆ. 12 ರಂದು ಶುಕ್ರವಾರ ಸಂಜೆ 5–30 ಗಂಟೆಗೆ ಇಲ್ಲಿನ [illegible]ದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ಪ್ರಾಂತ ಪ್ರಚಾರಕ [illegible] ಅವರೊಂದಿಗೆ ಪ್ರಚಲಿತ ಸಮಸ್ಯೆಗಳ ಬಗ್ಗೆ ಸಹಚಿಂತನ ಕಾರ್ಯಕ್ರಮ ಏರ್ಪಡಿಸಲಾಗಿದೆ. ಸಾರ್ವಜನಿಕರಿಗೆ ಸ್ವಾಗತವಿದೆ.

ರಾಜಧಾನಿಯಿಂದ ಹೊರಗಡೆ ಇದೇ ಮೊದಲು
ಜಿಲ್ಲಾ ಪತ್ರಕರ್ತರ ತರಬೇತಿ ಶಿಬಿರ

ಚಿಕ್ಕಮಗಳೂರು: ಜಿಲ್ಲಾ ಪತ್ರಕರ್ತರ ಸಂಘದ ಆಶ್ರಯದಲ್ಲಿ ಪತ್ರಕರ್ತರ ತರಬೇತಿ ಶಿಬಿರವೊಂದು ಇಲ್ಲಿಗೆ ಸಮೀಪದ ತಿಪ್ಪನಹಳ್ಳಿ ಕಾಫಿ ತೋಟದಲ್ಲಿ ಜ. 30 ಮತ್ತು 31 ರಂದು ನಡೆಯಿತು.

ಜಿಲ್ಲೆಯ ಇಪ್ಪತ್ತಕ್ಕೂ ಹೆಚ್ಚು ಪತ್ರಕರ್ತರು ಭಾಗವಹಿಸಿದ್ದ ಈ ಶಿಬಿರವನ್ನು ರಾಜ್ಯ ಸಣ್ಣ ಪತ್ರಿಕೆಗಳ ಸಂಪಾದಕರ ಸಂಘದ ಅಧ್ಯಕ್ಷರೂ, ಹಾಸನದ 'ಜನಮಿತ್ರ' ದಿನಪತ್ರಿಕೆಯ ಸಂಪಾದಕರೂ ಆದ ಕೃ. ನ. ಮೂರ್ತಿ ಉದ್ಘಾಟಿಸಿದರು.

ವ್ಯಾಪಕವಾದ ಮತ್ತು ಸಮಾಜದ ವಿಕಾಸದಲ್ಲಿ ನೇರ ಪಾತ್ರ ವಹಿಸಲು ಶಕ್ತವಾದ ಪತ್ರಿಕೋ[illegible] ಜವಾಬ್ದಾರಿಯುತವಾಗಿ ಬಳಸಿಕೊಳ್ಳುವ[illegible] ಪತ್ರಕರ್ತರು ತಮ್ಮ [illegible] ವಾಗಿ [illegible] ಭಾಷೆ [illegible] ಕೊಳ್ಳ[illegible] ಮೂರ್ತಿಯಾಗಿ [illegible] ಕೊಂಡು [illegible] ಅವರು [illegible] ಎಲ್ಲರಿಗೂ ಉಪಯುಕ್ತ[illegible].

ಪ್ರಾಸ[illegible] ತೋಟದ ಮಾ[illegible] ಎ. ಎಂ. [illegible] ಪ್ರಮುಖ [illegible] ಅನ್ನು [illegible] ವಂತೆ ಪತ್ರಕರ್ತರಿಗೆ [illegible].

ಶಿಬಿರದ ಸಮಾರೋಪ[illegible] 'ವಿಕ್ರಮ' ಸಂಪಾದಕ [illegible] ನೆರವೇರಿಸಿದರು.

ಬೆಂಗಳೂರಿನ [illegible] ಉಪನ್ಯಾಸಕರುಗಳಾದ [illegible] ಮತ್ತು ಎ. ಎಸ್. [illegible] ಅವರು ಶಿಬಿರವನ್ನು [illegible].

ಇಂಥದೊಂದು ಶಿಬಿರ [illegible] ಹೊರಗಡೆ ನಡೆಯುತ್ತಿ[illegible] ಮೊದಲು ಎಂದು ತಿಳಿ[illegible].

[illegible]ಂಭಯ್ಯನ ಸಾವು: ತುರ್ತು, ತೀವ್ರ ಕ್ರಮಕ್ಕೆ ಒಕ್ಕೊರಲಿನ ಒತ್ತಾಯ

ಚಿಕ್ಕಮಗಳೂರು: ಇಲ್ಲಿನ ಸರ್ವೆ ಇಲಾಖೆಯ ಜವಾನ ಶಂಭಯ್ಯನ ಸಾವಿಗೆ ಕಾರಣರಾದವರ ಮೇಲೆ ತಕ್ಷಣವೇ ತೀವ್ರಕ್ರಮ ತೆಗೆದುಕೊಳ್ಳುವಂತೆ ಚಿಕ್ಕಮಗಳೂರಿನ ನಾಗರಿಕರು ಒಕ್ಕೊರಲಿನಿಂದ ಒತ್ತಾಯಿಸಿದ್ದಾರೆ.

ಈಗಾಗಲೇ ಪತ್ರಿಕೆಗಳಲ್ಲಿ ವರದಿಯಾ[illegible] ಇಲ್ಲಿನ ಶಂಕರಪುರದ ನಿವಾಸಿ, [illegible] ಶಂಭಯ್ಯ ಎಂಬುವವರನ್ನು ಕ್ಷುಲ್ಲಕ [illegible] ಮೇಲೆ ಜ.19 ರಂದು [illegible]ಕಾರಿ ಬಾಷಾ ಸಾಬ್ [illegible] ನಗರ ಠಾಣೆಗೆ ಎಳೆ[illegible] ಬೈದು ಹೊಡೆದು [illegible].

[illegible] ಜ. 20, 23, 26 ರಂದು ಇದೇ [illegible], ಅಪಮಾನ ಮುಂದುವರಿದಾಗ ಅದನ್ನು ತಾಳಲಾರದೆ ತಾನು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಳ್ಳು[illegible]ವಾಗಿಯೂ, ತನ್ನ ಸಾವಿಗೆ ಕಾರಣರಾದ [illegible] ಇನ್‌ಸ್ಪೆಕ್ಟರ್ ಬಾಷಾಸಾಬ್ ಮತ್ತು ಪೇದೆ ಚೆಲ್ಲಪ್ಪ ಅವರುಗಳನ್ನು ಸರ್ಕಾರ ಶಿಕ್ಷಿಸಬೇಕೆಂದೂ ಪತ್ರಗಳನ್ನು ಬರೆದಿಟ್ಟು, ವಿಷ ಸೇವಿಸಿ, ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿರುವರೆನ್ನಲಾಗಿದೆ.

ಈ ಘಟನೆಯಿಂದ ಸಿಟ್ಟಿಗೆದ್ದ ಊರಿನ ಜನರು ಕರ್ನಾಟಕ ದಲಿತ ಸಂಘರ್ಷ ಸಮಿತಿ, ಜಾಗೃತ ಪ್ರಜಾ ಸಮಿತಿ ಮತ್ತು ವಿವಿಧ ರಾಜಕೀಯ ಪಕ್ಷಗಳ ನೇತೃತ್ವದಲ್ಲಿ ದೊಡ್ಡ ರೀತಿಯಲ್ಲಿ ಪ್ರತಿಭಟಿಸಿ, ಘಟನೆಯ ಬಗ್ಗೆ ನಿಷ್ಪಕ್ಷಪಾತ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ತೀವ್ರ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

ಆಪಾದನೆಗೆ ಗುರಿಯಾಗಿರುವ ಬಾಷಾ ಸಾಬ್ ಮತ್ತು ಚೆಲ್ಲಪ್ಪರನ್ನು ಅಮಾನತ್ತಿನಲ್ಲಿಡಲಾ[illegible] ಇದ್ದಾರೆ.

ತನಿಖೆ [illegible] ಯೋಗಾ, "ಆಪಾದಿತ"[illegible] ಗೊಳಿಸಲು [illegible] ಎಂದೂ ಜಿಲ್ಲಾ [illegible] ಕಾರಿ ಎಸ್. ಎಸ್. [illegible] ದಾಗಿ [illegible].

ಓದುಗರ ಪತ್ರ

ಕಿಗ್ಗ ದೇವಸ್ಥಾನದ ನೌಕರರ ಇತ್ಯರ್ಥವಾಗದ ಸಮಸ್ಯೆಗಳು: ಮುಷ್ಕರದ ನಿರ್ಧಾರ

'ದೀವಟಿಗೆ' ಸಂಪಾದಕರಿಗೆ,

ಸರ್ಕಾರದ ಸಮಸ್ತ ಇಲಾಖಾ ನೌಕರರುಗಳಿಗೆ ಕಾಲವರಿತು ಸಂಬಳ ಏರಿಕೆ, ತುಟ್ಟಿಭತ್ಯ ಇತ್ಯಾದಿಗಳನ್ನು ಹಂತ ಹಂತವಾಗಿ ಮಾರ್ಪಾಟು ಮಾಡುತ್ತಾ ಬಂದಿದೆ. ಆದರೆ ಇವರಲ್ಲಿ ಮುಜರಾಯಿ ದೇವಸ್ಥಾನದ ನೌಕರರನ್ನು ಆಯ್ದು ಕೊಳ್ಳದೆ, ಅವರುಗಳನ್ನು ಎಲ್ಲಾ ತರದ ಸವಲತ್ತುಗಳಿಂದ ದೂರವಿಟ್ಟಿದೆ. ಅವರುಗಳಿಗೆ ಸಂಬಳದ ಬಗ್ಗೆ ಮತ್ತು ದೇವರಿಗೆ ನೈವೇದ್ಯ ಒದಗಿಸುವಿಕೆ ಬಗ್ಗೆ ಕೊಡಲಾಗುತ್ತಿದ್ದ ಭತ್ಯದ ಬದಲು, ಕ್ವಿಂಟಾಲ್ ಒಂದಕ್ಕೆ 50/- ರೂ ದರದಲ್ಲಿ ಹಣ ಪಾವತಿಸುತ್ತಾ ಬರುತ್ತಿದೆ. ಇವನ್ನೆಲ್ಲ ಪ್ರತಿಭಟಿಸುವ ಹಾಗೂ ದೇವಾಲಯದ ನೌಕರರುಗಳ ಈ ಕೆಳಗಿನ ಬೇಡಿಕೆಗಳನ್ನು ಕಾರ್ಯರೂಪಕ್ಕೆ ತರುವಂತೆ ಒತ್ತಾಯಿಸುವ ಸಲುವಾಗಿ ನಾವು ತಾ. 1-3-82 ರಿಂದ ಸಾಮೂಹಿಕ ಮುಷ್ಕರ ನಡೆಸಲಿದ್ದೇವೆ. ಈ ಅವಧಿಯಲ್ಲಿ ನೌಕರರು ಯಾವುದೇ ರೀತಿಯ ಸೇವಾದಿಗಳಲ್ಲಿ ಭಾಗವಹಿಸುವುದಿಲ್ಲ.

ನೌಕರರ ಬೇಡಿಕೆಗಳು

1) ದೇವಸ್ಥಾನದ ನೌಕರರುಗಳನ್ನು ಸರ್ಕಾರದ ಇತರ ನೌಕರರಂತೆ ಪರಿಗಣಿಸಿ, ಅವರಿಗೂ ಸರ್ಕಾರಿ ನೌಕರರುಗಳಿಗೆ ಕೊಡುತ್ತಿರುವಂತೆ ಶ್ರೇಣಿ ಅನುಸರಿಸಿ ಸಂಬಳ, ತುಟ್ಟಿಭತ್ಯ, ರಜೆ, ಪೆನ್ಶನ್ ಕೊಡಬೇಕು.

2) ಶ್ರೀ ದೇವರ ನೈವೇದ್ಯಕ್ಕೆ ಮತ್ತು ವಾರ್ಷಿಕ ಅಥವಾ ಮಾಸಿಕ ಸಂಬಳದ ಬಗ್ಗೆ ಕೊಡುತ್ತಿರುವ ಭತ್ಯದ ಕ್ವಿಂಟಾಲ್ ದರ "ಲೆವಿ" ಧಾರಣೆಗಿಂತ ಕಡಿಮೆ ಇರಕೂಡದು.

3) 1974ನೇ ಇಸವಿಯಿಂದ ನೈವೇದ್ಯ ಮತ್ತು ಸಂಬಳದಬಗ್ಗೆ ಕೊಡಲ್ಪಟ್ಟ ಭತ್ಯದ ಮೊಬಲಗು ಹಾಲಿ 50/- ರೂ.ನಂತೆ ಪಾವತಿಯಾಗಿದೆ. ಈ ವ್ಯತ್ಯಾಸವನ್ನು ಗಣನೆ ಮಾಡಿ "ಲೆವಿ" ಧಾರಣೆ ರೀತಿ ಬಾಕಿ ಹಣವನ್ನು ಕೊಡಿಸಿಕೊಡಬೇಕು.

ದೇವಾಲಯದ ನೊಂದ ನೌಕರರು.
(24 ಸಹಿ ಇವೆ)
ಕಿಗ್ಗ, ಶೃಂಗೇರಿ ತಾ||

ಶೋಷಣೆಯ ಕಪಿಮುಷ್ಟಿಯಲ್ಲಿ ಸ್ಟೈಪೆಂಡರಿ ಪದವೀಧರರು

ದೇಶಾದ್ಯಂತ ಪೆಡಂಭೂತವಾಗಿ ಬೆಳೆಯುತ್ತಿರುವ ನಿರುದ್ಯೋಗ ಸಮಸ್ಯೆಯನ್ನು ಸ್ವಲ್ಪ ಮಟ್ಟಿಗಾದರೂ ಬಗೆ ಹರಿಸುವ ಉದ್ದೇಶದಿಂದ 1977ರಲ್ಲಿ ಅಂದಿನ ಮುಖ್ಯಮಂತ್ರಿ ದೇವರಾಜ ಅರಸ್‌ರವರು 'ಸ್ಟೈಪೆಂಡರಿ ಯೋಜನೆ'ಯನ್ನು ಜಾರಿಗೆ ತಂದರು. ಈ ಯೋಜನೆ ಅನ್ವಯ ಆರ್ಥಿಕವಾಗಿ ಹಿಂದುಳಿದ ನಿರುದ್ಯೋಗಿ ಪದವೀಧರರಿಗೆ ತಿಂಗಳಿಗೆ 150 ರೂಪಾಯಿಗಳ ಸ್ಟೈಪೆಂಡ್ ನೀಡುವ ಮೂಲಕ ಸರ್ಕಾರದ ವಿವಿಧ ಇಲಾಖೆಯಲ್ಲಿ ನೇಮಕ ಮಾಡಿಕೊಳ್ಳಲಾಯ್ತು. ಅದರಂತೆ ಸುಮಾರು 14 ಸಹಸ್ರಕ್ಕೂ ಮೀರಿ ನಿರುದ್ಯೋಗಿ ಪದವೀಧರರು ಈಗ್ಗೆ 4-5 ವರ್ಷಗಳಿಂದ ಕೇವಲ 150 ರೂಗಳ ಸ್ಟೈಪೆಂಡ್ ಪಡೆಯುತ್ತಾ, (ಇತ್ತೀಚೆಗೆ 200 ರೂ.ಗಳಿಗೆ ಏರಿಸಲಾಗಿದೆ.) ಇತ್ತ ಖಾಯಂ ಸರ್ಕಾರಿ ನೌಕರರೂ ಆಗದೆ, ಅತ್ತ ಸ್ವಂತ ಉದ್ಯೋಗ ನಡೆಸುವ ಶಕ್ತಿ, ಉತ್ಸಾಹವೂ ಇಲ್ಲದೆ ಅತಂತ್ರರಾಗಿದ್ದಾರೆ. ಇದಿಷ್ಟು ಎಲ್ಲರಿಗೂ ಗೊತ್ತಿರುವ ವಿಷಯ.

ಇವರು ಕೆಲಸ ನಿರ್ವಹಿಸುತ್ತಿರುವ ಕಮ್ಮ ಕಛೇರಿಗಳಲ್ಲಿ ಅಧಿಕಾರಿಗಳು, ಗುಮಾಸ್ತರಿಂದ ಎಂಥ ಶೋಷಣೆಗೆ ಒಳಗಾಗಿದ್ದಾರೆಂಬುದು ಹೆಚ್ಚು ಜನರಿಗೆ ಗೊತ್ತಿರಲಾರದು.

ಪ್ರತಿ ದಿನ ಇವರೂ ಖಾಯಂ ನೌಕರರಂತೆ ಕಛೇರಿಗೆ ಬಂದು ಹೋಗುತ್ತಾರೆ. ಕೆಲವು ಕಛೇರಿಗಳಲ್ಲಂತೂ ಖಾಯಂ ನೌಕರರಿಗಿಂತ ಹೆಚ್ಚಿನ 'ಕತ್ತೆ ಚಾಕರಿ' ಮಾಡುತ್ತಿದ್ದಾರೆ. ತಮ್ಮ ಪಾಲಿನ ಕೆಲಸಗಳನ್ನು ಸಹಾಯಕರಾದ ಸ್ಟೈಪೆಂಡರಿಗಳಿಗೆ ವಹಿಸಿ ತಾವು ಹೋಟೆಲ್‌ನಲ್ಲಿ ಹರಟೆ ಹೊಡೆಯುತ್ತಾ, ಈ ಬಡ ಪದವೀಧರರ ಮೇಲೆ ಅಧಿಕಾರ ಚಲಾಯಿಸುತ್ತಿರುವ, ಕೆಲವು ಸರ್ಕಾರಿ ನೌಕರರಿಗೆ ಮಾನವೀಯತೆ ಇದೆಯ

ಶಂಕರ್ ಬಾಗೇಶ್‌ಪುರ್, ಕೊಪ್ಪ

ಎಂಬ ಬಗ್ಗೆ ಅನುಮಾನ ಉಂಟಾದಲ್ಲಿ ಆಶ್ಚರ್ಯವಿಲ್ಲ. ಅಲ್ಲದೆ ಕೆಲವು ನೌಕರರಲ್ಲಿ 'ಸ್ಟೈಪೆಂಡರಿ ಪದವೀಧರ' ಎಂದರೆ ಏನೋ ಒಂದು ರೀತಿ ಕೀಳು ಮನೋಭಾವ. ಬಹುಶಃ ಇವರು ತಮಗಿಂತ ಕಡಿಮೆ ಸಂಬಳಕ್ಕಿರುವ ಅರೆ-ಸರ್ಕಾರಿ ಉದ್ಯೋಗಿಗಳೆಂಬ ಕಾರಣ ಇರಬೇಕು. ಹೀಗೆ ಬಹು ಪಾಲಿನ ಕೆಲಸಗಳನ್ನು ಸ್ಟೈಪೆಂಡರಿಯವರ ಕೈಲಿ ಮಾಡಿಸಿಕೊಂಡು ಅದರ ಕೀರ್ತಿ, ಹಣ, ಶಹಬಾಷ್‌ಗಿರಿಯನ್ನು ತಮ್ಮದಾಗಿಸಿ ಕೊಳ್ಳುತ್ತಿದ್ದಾರೆ.

ಸ್ಟೈಪೆಂಡರಿಯವರಿಗೆ ತಿಂಗಳಿಗೆ ಕೇವಲ ಮೂರು ದಿನಗಳ ವಿಶೇಷ ರಜವಿದೆ. ಈ ಮೂರು ದಿನಗಳಿಗಿಂತ ಒಂದು ದಿನ ಹೆಚ್ಚು ರಜಾ ಹೋದರೆ ಆ ದಿನ ಸ್ಟೈಪೆಂಡ್ ಖೋತಾ! ಸ್ಟೈಪೆಂಡರಿಯವರ ಬಗ್ಗೆ ದುರಭಿಪ್ರಾಯ ಉಳ್ಳ ಅನೇಕ ಕಛೇರಿಗಳಲ್ಲಿ ಅಧಿಕಾರಿಗಳು ಅನಾವಶ್ಯಕವಾಗಿಯೂ ಸ್ಟೈಪೆಂಡ್‌ನಲ್ಲಿ ಕಡಿತ ಮಾಡುತ್ತಿರುವ ಪ್ರಕರಣಗಳೂ ಸಾಕಷ್ಟಿವೆ.

ಹಿರಿಯ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿರುವ ಸ್ಟೈಪೆಂಡರಿಗಳದು ಇನ್ನೊಂದು ರೀತಿ ಬವಣೆ. ಈ ಶಾಲೆಗಳಲ್ಲಿ ಇವರು ಪ್ರತಿ ದಿನ ಖಾಯಂ ಉಪಾಧ್ಯಾಯರಂತೆ ಕೆಲಸ

(ಮೂರನೇ ಪುಟಕ್ಕೆ)

ಓದುಗರ ಪತ್ರ!?

"ಅಪ್ಪ-ಅಮ್ಮ ಇಲ್ಲದ" ಅಂಚೆ ಕಾರ್ಡೊಂದು 'ಶಿವಮನೆ ನಾಗರಾಜ, ಸಂಪಾದಕ ಪ್ರಕಾಶಕ, c/o ನೇಸರಮುದ್ರಣ ಕೊಪ್ಪ' ಎಂಬ ವಿಳಾಸ ಹೊತ್ತು ನಮಗೆ ಬಂದಿದೆ. ಅದರ ಬರಹ ಹೀಗಿದೆ:

ಕೊಪ್ಪ- ಇಲ್ಲಿನ ಕುಡಿಯುವ ನೀರಿನ ಆಶ್ರಯವಾದ ಕೆರೆಯಲ್ಲಿ ನೀರು ಕಡಿಮೆಯಾಗುತ್ತಿದ್ದು ನಲ್ಲಿಯಲ್ಲಿ ಕತ್ತೆಯ ಮರಿಗಳು ಬರುವುದು ಸಾಮಾನ್ಯವಾಗಿದೆ.

('ಕತ್ತೆಯ' ಪದಕ್ಕೆ ವಪ್ಪಕ್ಷರ ನಾವು ಸೇರಿಸಿದ್ದು -ಸಂ)

ಇದು ನಮ್ಮ 17-1-82ರ ಸಂಚಿಕೆಯ 'ನಲ್ಲಿಯ ನೀರಿನಲ್ಲಿ ಕಪ್ಪೆಮರಿಗಳು' ಎಂಬ ವರದಿಗೆ ಪ್ರತಿಕ್ರಿಯೆ ಎಂದು ಕಾಣುತ್ತದೆ. ಆದರೆ ಇದೇನು ಸಿಟ್ಟಿನಿಂದ ಬರೆದದ್ದಾ, ತಿಳಿಹಾಸ್ಯದಿಂದಲಾ ಅಥವಾ ಇನ್ಯಾವ ದೃಷ್ಟಿಯಿಂದಲಾದರೂ ಬರೆದದ್ದಾ ಎಂಬುದು ಅರ್ಥವಾಗುವುದಿಲ್ಲ.

ಈ ಕುರಿತು ನೀವು ನಿಮ್ಮ ಕಲ್ಪನೆಗಳನ್ನು ಚಾಚಬಹುದು. ಸ್ವಾರಸ್ಯಕರವಾದ ಹಿತಮಿತವಾದ ಬರಹವನ್ನು ಪ್ರಕಟಿಸುತ್ತೇವೆ. -ಸಂ.

ವಿಳಾಸ: ಸಂಪಾದಕರು,
'ದೀವಟಿಗೆ' ವಾರಪತ್ರಿಕೆ,
ಕೊಪ್ಪ-ಚಿಕ್ಕಮಗಳೂರು ಜಿಲ್ಲೆ

ಪಡಿಯಚ್ಚಿನ ಯುಗ

ಎ. ಜಿ. ಸುಬ್ರಹ್ಮಣ್ಯ

ಯಂತ್ರಗಳು ತಯಾರಿಸಿದ ವಸ್ತುಗಳನ್ನು ನೋಡಿ. ಎಲ್ಲಾ ಒಂದೇ ಬಣ್ಣದವು, ಆಕಾರದವು, ಗಾತ್ರದವು, ಒಂದು ಮಾಡೆಲ್ ಎಂದರೆ ಅದರಲ್ಲಿ ಎಳ್ಳಷ್ಟೂ ಭಿನ್ನವಿಲ್ಲ; ವೈವಿಧ್ಯವಿಲ್ಲ. ಅದೇ ಯಂತ್ರದ ಯಶಸ್ಸಿಗೆ ಸಾಕ್ಷಿಯೆಂದೂ ಹೇಳುತ್ತಾರೆ. ಆದರೆ ಈಗ ಮಾನವರಲ್ಲೂ ಈ ಏಕರೂಪತೆಯ ಗಾಳಿ ಬೀಸುತ್ತಿದೆ.

ಉಡುಪಿನಲ್ಲಂತೂ ಯಂತ್ರದ ಪ್ರಭಾವದಿಂದ ಏಕರೂಪತೆ ವ್ಯಾಪಿಸಿದೆ. ಆಚಾರ, ವಿಚಾರಗಳಲ್ಲಿಯೂ ಫ್ಯಾಶನ್ನಿನ ಗಾಳಿ ಬೀಸಿ ಸಾಕಷ್ಟು ಏಕರೂಪತೆ ಬಂದಿದೆ. ಒಂದು ಊರಿನಲ್ಲಿ ಒಂದೇ ಉಡುಪಿನ ಹತ್ತೆಂಟು ಜನರನ್ನು ಕಾಣಲು ಸಾಧ್ಯವಾದರೆ, ಒಂದೇ ದಿನಚರಿಯುಳ್ಳ ಕೆಲವರನ್ನಾದರೂ ಕಾಣಬಹುದು. ಕ್ಲಪ್ತ ಸಮಯಕ್ಕೆ ಏಳುವುದು, ಕ್ಲಪ್ತ ಕೆಲಸಗಳನ್ನು ಮಾಡುವುದು, ಕ್ಲಪ್ತ ವಸ್ತುಗಳನ್ನು ಕೊಳ್ಳುವುದು ಇತ್ಯಾದಿ. ಆದ್ದರಿಂದ ಇಂದಿನ ಯುಗ ಪಡಿಯಚ್ಚಿನ ಯುಗ.

ಭಾವನೆಗಳಲ್ಲೂ ಏಕರೂಪತೆ?

ಈ ರೀತಿ ವೈವಿಧ್ಯರಹಿತ ಸಮಾಜ ಹೆಚ್ಚು ಕೆಡಕನ್ನು ಮಾಡದಿರಬಹುದು; ಆದರೆ ಭಾವನೆಗಳಲ್ಲಿ ವೈವಿಧ್ಯ ಮಾಯವಾಗಿರುವುದು ನಿಜಕ್ಕೂ ಶೋಚನೀಯ. ವಿಜ್ಞಾನಗಳಂತಹ ಸಾರ್ವಕಾಲಿಕ ಸತ್ಯಗಳೆಂದು ಸಾರಿದ ವಿಚಾರಗಳನ್ನು ಬಿಡಿ; ಕಲೆಯಂತಹ ವೈಯಕ್ತಿಕ ಪ್ರಭಾವದ ವಿಚಾರದಲ್ಲಿಯೂ ಭಾವನೆಯ ವೈವಿಧ್ಯ ಕಂಡು ಬರುತ್ತಿಲ್ಲ. ಒಂದು ನಟ, ಒಂದು ಚಲನಚಿತ್ರ, ಒಂದು ಕ್ರೀಡೆ, ಇವೆಲ್ಲಾ ಎಲ್ಲರಿಗೂ ಯೋಗ್ಯವೆನಿಸಿ ಕಾಣಿಸುತ್ತಿರುವುದರಲ್ಲಿ ಅರ್ಥವಿಲ್ಲ. ಆದರೆ ಈ ಭಾವನೆಯ ಸುಳಿಗೆ ನಾವೂ ಸಿಕ್ಕಿ ಆ ತೀರ್ಮಾನಕ್ಕೆ ಬಂದುಬಿಡುತ್ತೇವೆ.

ಈ ಜಾಹಿರಾತು ಮತ್ತು ಪ್ರಚಾರ ಯುಗದಲ್ಲಿ ನಮ್ಮ ಭಾವನೆಗಳನ್ನು ಒಟ್ಟುಗೂಡಿಸಿ, ಅವನ್ನು ಒಂದೇ ದಿಕ್ಕಿಗೆ ಹರಿಸಿ, ತಮ್ಮ ಬೇಳೆ ಬೇಯಿಸಿಕೊಳ್ಳುವ ಸಂಸ್ಥೆಗಳಿಗೇನೂ ಕೊರತೆಯಿಲ್ಲ. ಬ್ಯಾಂಕಿನಲ್ಲಿನ ನೌಕರಿಯೇ ಒಳ್ಳೆಯದು, ಫಾರಿನ್ನಿನಲ್ಲಿ ತಯಾರಾದ ವಸ್ತುವೇ ಶ್ರೇಷ್ಠವಾದುದು, ಭಾರತದ ಇಂದಿನ ಸಮಸ್ಯೆಗಳಿಗೆ ಈ ಎಲ್ಲಾ ಭಾವನೆಗಳು ನಮ್ಮೆಲ್ಲರಲ್ಲಿಯೂ ಸಾರ್ವತ್ರಿಕವಾಗಿ ಹೇಗೆ ಬಂದಿವೆ? ರಾಜಕೀಯದಲ್ಲಿ ಒಂದೇ ಪಕ್ಷ, ಒಂದೇ ವ್ಯಕ್ತಿ, ಬೇರೆ ಬೇರೆ ಕಾಲದಲ್ಲಿ ಅತೀ ಹೆಚ್ಚು ಅಥವಾ ಅತೀ ಕಡಿಮೆ ಮತಗಳನ್ನು ಪಡೆಯಲು ಹೇಗೆ ಸಾಧ್ಯ? ಇವೆಲ್ಲಾ ಭಾವನೆಯಲ್ಲಿ ವೈವಿಧ್ಯದ ಕೊರತೆಯಿಂದ ಪ್ರಚಾರದ ಗಾಳಿ ತೂರಿಸಿದ ಅಂಶಗಳಲ್ಲವೇ?

ವಿದ್ಯಾಭ್ಯಾಸ ಪದ್ಧತಿಯಲ್ಲಿಯೇ ಈ ಏಕರೂಪತೆಯ ಪಿಡುಗು ಪ್ರಾರಂಭವಾಗುತ್ತದೆ. ವಿದ್ಯಾರ್ಥಿಗಳನ್ನು ಒಂದೇ ರೀತಿಯಲ್ಲಿ-ಒಂದೇ ಶಿಸ್ತಿನಲ್ಲಿ- ಯೋಚಿಸಲು ನಾವೇ ಪ್ರೇರೇಪಿಸುತ್ತೇವೆ. ವೈವಿಧ್ಯಯುಳ್ಳ ವ್ಯಕ್ತಿತ್ವವನ್ನು ಅಳಿಸಿ ಏಕರೂಪತೆಯ ಕಂಬಿಯನ್ನು ಹತ್ತಿಸುತ್ತೇವೆ. ಮುಂದೆ ಜೀವನವೆಲ್ಲಾ ಅದೇ ಕಂಬಿಯ ಮೇಲೆ ಸಾಗಿ ಒಂದೇ ಗುರಿಯನ್ನು ತಲುಪುತ್ತವೆ.

ಯಂತ್ರ ನಾಗರೀಕತೆ

ಇಂದು ಯಂತ್ರ ನಾಗರೀಕತೆ ನಮ್ಮನ್ನು ಗೆದ್ದಿದೆಯೆ? ಅದು ತನ್ನ ಪ್ರಭಾವವನ್ನು ನಮ್ಮ ಸಂಸ್ಕೃತಿಯ ಮೇಲೆ ಬೀರಲು ಪ್ರಾರಂಭಿಸಿದೆಯೇ? ಹೀಗಾದರೆ ನಾವೆಲ್ಲಾ ಒಂದು ದಿನ ಯಂತ್ರದ ಗುಲಾಮರಾಗಿ ಸಂಸ್ಕೃತಿಯನ್ನು ಕಳೆದು ಕೊಳ್ಳುತ್ತೇವೆ. ಆಗ ವೈವಿಧ್ಯವನ್ನು ಪ್ರೋತ್ಸಾಹಿಸುವ ಪ್ರಕೃತಿ ನಮ್ಮನ್ನು ಬಿಟ್ಟು ಬೇರೊಂದು ಜೀವಿಯನ್ನು ತನ್ನ ವಿಕಾಸಕ್ಕಾಗಿ ಆರಿಸಿಕೊಂಡರೆ ಆಶ್ಚರ್ಯವಿಲ್ಲ.

ಟೀಕೆ ಬೇರೆ ಬೇಕೆ?

ಭಾರತದ ರಾಜಕಾರಣಿಗಳು ಸಾಯುವವರೆಗೂ ನಿವೃತ್ತರಾಗರು. ಇವರಿಬ್ಬರೂ ಅದಕ್ಕೆ ನಿದರ್ಶನ —ಕನ್ನಡ ಪ್ರಭ (ಸುಖಾಡಿಯಾ ಮತ್ತು ಹಾಥಿ ಇವರ ನಿಧನದ ಬಗ್ಗೆ)

x x x

ಹಾಲು ಮಾರುವ ಕಸುಬಿನ ರೆಡ್ಡಿ ಗುಟ್ಟಹಳ್ಳಿಯ ರೇಖಾ ಎಂಬ ತರುಣಿಯನ್ನು ಕಳೆದ ಮೂರು ವರ್ಷಗಳಿಂದ ಪ್ರೇಮಿಸಿದ್ದಾಗಿ "ತಪ್ಪೊಪ್ಪಿಗೆ" ಹೇಳಿಕೆ ನೀಡಿದ್ದಾನೆಂದು ಪೋಲೀಸರ ಹೇಳಿಕೆ

ಕನ್ನಡ ಪ್ರಭದಲ್ಲಿ ವರದಿ

x x x

ಭಾರತ ದೇಶವನ್ನು ಗಂಡಸರಿಂದ ಆಳಲು ಸಾಧ್ಯವಿಲ್ಲವೆಂಬುದನ್ನು ಕೇವಲ ಎರಡು ವರ್ಷ ಕಿತ್ತಾಡುತ್ತಾ ಆಳ್ವಿಕೆ ಮಾಡಿದ ಜನತಾ ಪಕ್ಷದ ಮನುಷ್ಯರು ಸ್ಪಷ್ಟಪಡಿಸಿದ್ದಾರೆ.

—ಮನೋರಮಾ ಮಧ್ವರಾಜ್

x x x

ಕೇವಲ 1790/-ರೂ* ಗಳಲ್ಲಿ ಮೂರು ರಾತ್ರಿ ಮತ್ತು ನಾಲ್ಕು ಹಗಲುಗಳ ಮಜಾ! (ಒಂದು ಜೋಡಿಗೆ)

*ಶೇ 30 ಸರಕಾರಿ ತೆರಿಗೆಗಳು ಪ್ರತ್ಯೇಕ

—'ಇಂಡಿಯಾ ಟುಡೇ'ಯಲ್ಲಿ ಹೋಟೆಲ್ ಒಬೇರಾಯ್ ಪ್ಯಾಲೇಸ್, ಶ್ರೀನಗರ, ಕಾಶ್ಮೀರ ಇವರ ಜಾಹೀರಾತು

x x x

ವಾರಕ್ಕೊಂದು ಗಂಟೆ ಕೆಲಸಕ್ಕೆ ತಿಂಗಳಿಗೆ 30/-ರೂ (ತಿಂಗಳಿಗೆ ಗರಿಷ್ಠ ಇನ್ನೂರು ರೂ) ಸಂಬಳಕ್ಕೆ ಹಂಗಾಮಿಯಾಗಿ ಕೆಲಸ ಮಾಡಲು ಭೌತ ಶಾಸ್ತ್ರದಲ್ಲಿ ಮೊದಲ ಅಥವಾ ಎರಡನೇ ದರ್ಜೆಯಲ್ಲಿ ಪಾಸಾದ ಎಂ. ಎಸ್ಸಿ. ಪದವೀಧರರು ಬೇಕಾಗಿದ್ದಾರೆ.

—'ದೀವಟಿಗೆ'ಯಲ್ಲಿ ಜಾಹೀರಾತು

ಸ್ಟೈಪೆಂಡರಿ ಪದವೀಧರರು ....

ನೋಡುತ್ತಿದ್ದರೂ, ಅವರ ಬಗ್ಗೆ, ಅವರ ಕೆಲಸದ ಬಗ್ಗೆ ಅಸಮಾಧಾನ ವ್ಯಕ್ತ ಪಡಿಸುವ ಉಪಾಧ್ಯಾಯರು, ಮುಖ್ಯೋಪಾಧ್ಯಾಯರೂ ಇದ್ದಾರೆ. ಇನ್ನು ಕೆಲವು ಶಾಲೆಗಳಲ್ಲಿ ಸ್ಟೈಪೆಂಡರಿಗಳು ಗಂಟೆಲುಹೊಡೆದುಕೊಳ್ಳುತ್ತಿರುವಾಗ ಖಾಯಂ ಉಪಾಧ್ಯಾಯರು ನಿದ್ರೆ ಹೊಡೆಯುತ್ತಿರುವ ಪ್ರಸಂಗಗಳೂ ಇವೆ.!

ಪ್ರತಿ ತಿಂಗಳು ತಮ್ಮ ಪಾಲಿನ ಸ್ಟೈಪೆಂಡ್ ಹಣ ಪಡೆಯುವುದೇ ಒಂದು ದುಸ್ಸಾಹಸವಾಗಿದೆ ಇವರ ಪಾಲಿಗೆ. 'ಸಂಬಳ'ದ ದಿನಕ್ಕಾಗಿ ಅವರು ಚಾತಕ ಪಕ್ಷಿಗಳಂತೆ ಉಸಿರು ಹಿಡಿದು ಕಾಯುವಂತಾಗಿದೆ. ಏಕೆಂದರೆ ಸ್ಟೈಪೆಂಡ್ ಬರುವುದಕ್ಕೆ, ಬಟವಾಡೆ ಮಾಡುವುದಕ್ಕೆ ನಿರ್ದಿಷ್ಟ ದಿನವೇನೂ ಇಲ್ಲ. ತಿಂಗಳ ಯಾವುದಾದ [illegible]ರೂ, ಕೆಲವು ಕಡೆಗಳಲ್ಲಿ ಹಿಂದಿನ ತಿಂಗಳ ಸ್ಟೈಪೆಂಡ್ ಪಡೆಯದೇ ಇರುವ ದಾರುಣ ನಿದರ್ಶನಗಳೂ ಇವೆ. ಸ್ಟೈಪೆಂಡ್ ವಿತರಿಸುವಾಗಲೂ ಕೆಲವು ಕಛೇರಿಗಳಲ್ಲಿ ಅಧಿಕಾರಿಗಳು ಸ್ಟೈಪೆಂಡರಿಯವರೊಡನೆ ನಡೆದು ಕೊಳ್ಳುವ ರೀತಿ, ಮಾನವೀಯ ದೃಷ್ಟಿ ಇರುವ ಯಾರನ್ನೂ ಬೇಸರಗೊಳಿಸಬಹುದು.

ಒಟ್ಟಿನಲ್ಲಿ ಪೂರ್ಣ ಉದ್ಯೋಗಿಗಳೂ ಅಲ್ಲದೆ, ನಿರುದ್ಯೋಗಿ ಗಳೂ ಅಲ್ಲದೆ ಖಾಯಂ ನೌಕರಿಗಾಗಿ ಹೋರಾಡುತ್ತಾ ಇನ್ನೂ ತ್ರಿಶಂಕು ಸ್ಥಿತಿಯಲ್ಲಿ ನರಳುತ್ತಿರುವ ಈ ಯುವಜನರ ಗೋಳನ್ನು ಅರಿತು ಸರ್ಕಾರ ಖಾಯಂಗೊಳಿಸುವರೆಗೆ ಇಲಾಖೆಯ ಅಧಿಕಾರಿಗಳು, ಸರ್ಕಾರಿ ನೌಕರರು ಇವರೊಂದಿಗೆ ಸೌಹಾರ್ದಯುತವಾಗಿ ನಡೆದರೆ ಈ ಹತಾಶ ಹೃದಯಗಳಲ್ಲಿ ಸ್ವಲ್ಪವಾದರೂ ನೆಮ್ಮದಿ ನೆಲೆಸೀತು.

ಹಿರಿಯ ಪತ್ರಕರ್ತರ ಅನುಭವದ ಮಾತುಗಳು

ಜನವರಿ30 ಮತ್ತು 31ರಂದು ಜಿಲ್ಲಾ ಪತ್ರಕರ್ತರ ಸಂಘದ ಆಶ್ರಯದಲ್ಲಿ ಚಿಕ್ಕಮಗಳೂರಿನಲ್ಲಿನಡೆದ ಪತ್ರಕರ್ತರ ತರಬೇತಿ ಶಿಬಿರದಲ್ಲಿ ಜಿಲ್ಲೆಯ ಹಲವು ಹಿರಿಯ ಪತ್ರಕರ್ತರು ತಮ್ಮ ಅನುಭವವನ್ನು ಕಿರಿಯರೊಡನೆ ಹಂಚಿಕೊಂಡರು. ಅವರ ಮಾತುಗಳ ಕೆಲವು ಪ್ರಮುಖ ಅಂಶಗಳು ಇಲ್ಲಿವೆ

ಕೆ. ಪ್ರಹ್ಲಾದ ರಾವ್,
ಸಂಪಾದಕರು, ಕೋಲಾರ ಪತ್ರಿಕೆ.

(ಕೋಲಾರ ಜಿಲ್ಲೆಯ ಸದಾಕಾಲದ ಎರಡು ಸಮಸ್ಯೆಗಳು- ಹಿಂದೂ-ಮುಸ್ಲಿಂ ಗಲಭೆ ಮತ್ತು ಅನಾವೃಷ್ಟಿ. ಈ ಹಿನ್ನೆಲೆಯಲ್ಲಿ ಪ್ರಹ್ಲಾದ ರಾವ್ ಮಾತಾಡಿದರು)

—ಕೋಮು ಗಲಭೆಗಳನ್ನು ವರದಿ ಮಾಡುವಾಗ ಪತ್ರಕರ್ತನಿಗೆ ಜಗಳ ಕಡಿಮೆ ಮಾಡುವ ದೃಷ್ಟಿ ಇರಬೇಕು. ಬರವಣಿಗೆಯಲ್ಲಿ ಅತ್ಯಂತ ಸಂಯಮ, ಹಿತಮಿತ ಇರಬೇಕು. ಒಟ್ಟಿನಲ್ಲಿ ಕೋಮು ಗಲಭೆಯ ವರದಿ ಎಂದರೆ 'ಶಾಂತಿ ಮಂತ್ರ'ದ ವರದಿ.

ಅತಿವೃಷ್ಟಿ, ಅನಾವೃಷ್ಟಿ, ಪ್ರವಾಹ, ಕ್ಷಾಮ, ಮುಂತಾದ ನೈಸರ್ಗಿಕ ಪ್ರಕೋಪಗಳ ವರದಿಯ ಗುರಿ ಮೊದಲನೆಯದಾಗಿ ತೊಂದರೆಗೊಳಗಾದವರಿಗೆ ಪರಿಹಾರ ದೊರಕಲು ಅನುವಾಗುವುದು. ಅಧಿಕಾರಿಗಳು ಪರಿಹಾರ ಕಾಮಗಾರಿಗಳನ್ನು ಸರ್ಕಾರಕ್ಕೆ ಶಿಫಾರಸ್ಸು ಮಾಡುವಾಗ ಪತ್ರಿಕಾ ವರದಿಗಳಿಂದ ಪ್ರಯೋಜನ, ಮಾರ್ಗದರ್ಶನ ಪಡೆಯುವಂತಿರಬೇಕು. ಅಂಕಿಸಂಖ್ಯೆ ಮಾಹಿತಿಗಳನ್ನು ಒಳಗೊಂಡ, ಉತ್ಪ್ರೇಕ್ಷೆಯಿಲ್ಲದ ವರದಿಯಾಗಿರಬೇಕು.

ಎಚ್. ಎಸ್. ಸೂರ್ಯನಾರಾಯಣ
ಇಂಡಿಯನ್ ಎಕ್ಸ್‌ಪ್ರೆಸ್, ಕನ್ನಡಪ್ರಭ ವರದಿಗಾರರು, ಕಡೂರು.

[ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಗಾಂಧೀವಾದಿ; ಪತ್ರಿಕಾ ರಂಗದಲ್ಲಿ 33 ವರ್ಷಗಳ ಅನುಭವವುಳ್ಳವರು.]

—ಸ್ವಾತಂತ್ರ್ಯ ಪೂರ್ವದಲ್ಲಿ ಪತ್ರಿಕೋದ್ಯಮ ಒಂದು ವ್ರತವಾಗಿತ್ತು. ಇಂದು ಅದೊಂದು ಲಾಭತರುವ ಉದ್ಯಮವಾಗಿದೆ.

—'ಪ್ರಜಾಪ್ರಭುತ್ವ' ಎಂದರೆ ಚುನಾವಣೆ- ಉಪ ಚುನಾವಣೆ- ಮರು ಚುನಾವಣೆ- ಮಧ್ಯಂತರ ಚುನಾವಣೆ .... ಇಷ್ಟೇ ಅಲ್ಲ. 'ಪ್ರಜಾ ಪ್ರಭುತ್ವ'ದ ಕಲ್ಪನೆ ಅಮೇರಿಕ ಮುಂತಾದ ಪಾಶ್ಚಿಮಾತ್ಯ ದೇಶಗಳಲ್ಲಿ ಮೂಡಿದಾಗ ಅದರ ಮೂಲದಲ್ಲಿ ಇದ್ದ ಆದರ್ಶಗಳು ಸ್ವಾತಂತ್ರ್ಯ, ಸಮಾನತೆ, ಸೋದರತ್ವ. ಆದರೆ ಶೇ 50ಕ್ಕಿಂತ ಹೆಚ್ಚು ಅನಕ್ಷರತೆ ಇರುವ ನಮ್ಮಂಥ ದೇಶದಲ್ಲಿ ಪ್ರಜಾ ಪ್ರಭುತ್ವ ಎಂಬುದಕ್ಕೆ ಏನರ್ಥ?

—ಪತ್ರಕರ್ತನಿಗೆ ಮುಖ್ಯವಾಗಿ ಇರಬೇಕಾದ ನೇಮ ಎಂದರೆ ಆತ ಯಾವುದೇ ಪಕ್ಷದ ಸದಸ್ಯನಾಗಿರಬಾರದು.

—ಪತ್ರಕರ್ತನಿಗೆ ಯಾರ ಬಗ್ಗೆಯೂ ಅತೀ ಮಮತೆ, ಅತೀ ದ್ವೇಷ ಸಲ್ಲದು.

—ಪತ್ರಕರ್ತರು ತಮ್ಮ ಬಗ್ಗೆ ಜನರಲ್ಲಿ ನಂಬಿಕೆ(ವಿಶ್ವಾಸಾರ್ಹತೆ—Credibility) ಉಳಿಸಿಕೊಳ್ಳುವುದು ಅತಿ ಮುಖ್ಯ. ಸ್ವಂತ ಕೆಲಸಕ್ಕಾಗಿ ಅಧಿಕಾರಿಗಳ ಹತ್ತಿರ ಹೋಗಬೇಡಿ. ಬರವಣಿಗೆಯಲ್ಲಿ ತಾಳ್ಮೆ, ವಿವೇಚನೆ ಕೊಂಚವೂ ತಪ್ಪಬಾರದು.

ಪತ್ರಿಕೋದ್ಯಮದ ಪಿತಾಮಹ ಜೋಸೆಫ್ ಪುಲಿಟ್ಜರ್‌ರನ್ನು ನೆನೆಯುವುದರೊಂದಿಗೆ ತಮ್ಮ ಮಾತು ಪ್ರಾರಂಭಿಸಿದ ಚಿಕ್ಕಮಗಳೂರಿನ ಪಿ. ಟಿ. ಐ. ವರದಿಗಾರ **ಎಸ್.ಎನ್. ಶ್ರೀಕಂಠ** ಹಿಂದೆ ಪತ್ರಿಕೋದ್ಯಮದ ಹಿರಿಯರೊಬ್ಬರು ಹೇಳಿದ ಈ ಕೆಳಗಿನ ಮಾತುಗಳನ್ನು ಸ್ಮರಿಸಿಕೊಂಡರು.

ಪತ್ರಿಕೆ ಸಮಾಜದ ಕನ್ನಡಿ; ಪತ್ರಕರ್ತ ಆ ಕನ್ನಡಿಯ ಹಿಂಬದಿಗೆ ಲೇಪಿಸಿದ ಪಾದರಸದಂತೆ.

ಆ ಕನ್ನಡಿ ಭೂತಕನ್ನಡಿಯಾಗಬಾರದು -ಇತ್ಯಾದಿ.

ತಮ್ಮ ವೃತ್ತಿ ಜೀವನದ ಹಲವಾರು ಸ್ವಾರಸ್ಯಕರ ಘಟನೆಗಳನ್ನು ವರ್ಣಿಸಿದ ಅವರು ನಮ್ಮ ಸುತ್ತಮುತ್ತ ಜರುಗುವ ಘಟನೆಗಳಿಂದಲೇ ಸುದ್ದಿಗೆ ಗ್ರಾಸವಾಗುವ ಅಂಶಗಳನ್ನು ಆಯ್ದುಕೊಳ್ಳುವುದು, ಆಸಕ್ತಿ ಹುಟ್ಟುವಂತೆ ಬರೆಯುವುದು - ಇವನ್ನು ಕುರಿತು ವಿವರಿಸಿದರು.

ಎಸ್. ವಿ. ಕೀರ್ತಿನಾರಾಯಣ ರಾವ್,
'ಹಿಂದು' ವರದಿಗಾರರು.

—ಪತ್ರಕರ್ತ ದಿನ ದಿನವೂ ತನ್ನ ಜ್ಞಾನವನ್ನು ಬೆಳೆಸಿಕೊಳ್ಳಬೇಕು; ಹೊಸ ಹೊಸ ವಿಚಾರಗಳ ಪರಿಚಯ ಮಾಡಿಕೊಳ್ಳಬೇಕು- ಒಂದು ಇಂಗ್ಲೀಷ್ ಹೇಳಿಕೆಯಂತೆ 'ನೀವು ಹಳಬರಾದರೂ ನಿಮ್ಮ ಆಲೋಚನೆಗಳು ಹೊಸತಾಗಿರಬೇಕು.'

—ಪತ್ರಕರ್ತ ಸ್ವಂತಿಕೆ, ವ್ಯಕ್ತಿತ್ವ ಬೆಳೆಸಿಕೊಳ್ಳಬೇಕು. ಇದು ಸತತ ಜ್ಞಾನಾರ್ಜನೆಯಿಂದ ಮಾತ್ರ ಸಾಧ್ಯ.

—ದೇಶದ ಅಥವಾ ವ್ಯಕ್ತಿಗಳ ಗೌರವಕ್ಕೆ ಧಕ್ಕೆಯಾಗುವಂತಹ ವರದಿ ಅಥವಾ ಜಾಹೀರಾತು ಪ್ರಕಟಿಸಬಾರದು.

ಮೈಸೂರಿನಲ್ಲಿ 'ಕನ್ನಡ ಪ್ರಭ' ವರದಿಗಾರರಾಗಿರುವ **ಎಚ್.ಆರ್. ಶ್ರೀಶ** ಅನಿವಾರ್ಯವಾಗಿ ಬರಲಾಗದ್ದಕ್ಕೆ, ತಮ್ಮ ಅಭಿಪ್ರಾಯಗಳನ್ನು ಬರೆದು ಕಳಿಸಿದ್ದರು. ಅದು ಹೀಗಿದೆ—

ಗ್ರಾಮೀಣ ಪ್ರದೇಶದಲ್ಲಿ ಸುದ್ದಿಸಂಗ್ರಹಣೆ, ವರದಿಗಾರಿಕೆ ಬಹಳ ಕಷ್ಟ. ಅದಕ್ಕೆ ಚಾಕಚಕ್ಯತೆ ಬೇಕು. ಎಷ್ಟೋ ವೇಳೆ ಸರ್ಕಾರಿ ಅಧಿಕಾರಿಗಳೇ ಪ್ರಮುಖ ಸುದ್ದಿಮೂಲಗಳಾಗಿರುತ್ತಾರೆ. ಅವರಿಗೆ ಜಾಗೃತ ವರದಿಗಾರರ ಬಗ್ಗೆ ಸಂಶಯ ಜಾಸ್ತಿ.

—ಹಳ್ಳಿಗಾಡಿನಲ್ಲಿ ನೇರವಾದ ಬರಹದ ಪರಿಣಾಮ ತೀವ್ರವಾಗಿರುತ್ತದೆ. —ವರದಿ ವರದಿಗಾರನ ಮೇಲೆ ಹಲ್ಲೆಯೇ ನಡೆಯುವ ಸಾಧ್ಯತೆ ಜಾಸ್ತಿ. ಇದಕ್ಕಾಗಿ ಜನಸಾಮಾನ್ಯರ ವಿಶ್ವಾಸ, ಬೆಂಬಲ ಆದಷ್ಟೂ ಗಳಿಸಿಕೊಳ್ಳಬೇಕು. ಅಂಥ ಬರವಣಿಗೆಗೆ ಮೊದಲು ಆದಷ್ಟು ಹೆಚ್ಚು ಜನರ ಜೊತೆ ಚರ್ಚಿಸಿ, ಮಾನಸಿಕವಾಗಿ ಸಿದ್ಧ ಪಡಿಸಿಕೊಳ್ಳಬೇಕು.

—ಹರಿಜನರ ಮತ್ತಿತರ ಹಿಂದುಳಿದವರ ಬಗ್ಗೆ ಬರೆಯುವಾಗ ಅವರ ಆರ್ಥಿಕ ಸಮಸ್ಯೆಗಳು, ಅವುಗಳ ಪರಿಹಾರ - ಇವಕ್ಕೆ ಒತ್ತು ಕೊಡಬೇಕು.

—ಪತ್ರಕರ್ತ ಸಮಾಜಕ್ಕೆ ಹೆಚ್ಚು ನಿಷ್ಠನಾಗಿರಬೇಕು. ವೈಯಕ್ತಿಕ ನಡವಳಿಕೆ, ಆಚರಣೆಗಳಲ್ಲಿ ಶುದ್ಧಿ ಇರಬೇಕು. ಉದಾಹರಣೆಗೆ ಅಸ್ಪೃಶ್ಯತೆಯ ವಿರುದ್ಧವಾಗಿ ಬರೆಯುತ್ತ, ಸ್ವತಃ ಅದನ್ನು ಆಚರಿಸುತ್ತಿದ್ದರೆ, ಇದಕ್ಕೆ ಹಳ್ಳಿಗಾಡಿನಲ್ಲಿ ಪ್ರತಿಕ್ರಿಯೆ ಜಾಸ್ತಿ.

ಬಿ. ಸು. ನಾ. ಮಲ್ಯ
ಸಂಪಾದಕರು, 'ವಿಕ್ರಮ' ವಾರಪತ್ರಿಕೆ

—ಪತ್ರಿಕಾ ಸ್ವಾತಂತ್ರ್ಯ ಎಂದರೆ ಬರಹಗಾರ, ವರದಿಗಾರ, ಸಂಪಾದಕ ಅಥವಾ ಪತ್ರಿಕಾ ಮಾಲೀಕನ ಸ್ವಾತಂತ್ರ್ಯ ಎಂದು ಅರ್ಥವಲ್ಲ. ತಾವು ತಿಳಿಯಲೇ ಬೇಕಾದ್ದನ್ನು ತಿಳಿದುಕೊಳ್ಳುವ ಜನರ ಹಕ್ಕು ಪತ್ರಿಕಾ ಸ್ವಾತಂತ್ರ್ಯ. ಇದನ್ನು ಮೀರಿದ ಯಾವ ಸ್ವಾತಂತ್ರ್ಯವೂ ಪತ್ರಕರ್ತನಿಗಿಲ್ಲ.

—ಸ್ವಾತಂತ್ರ್ಯದ ಮಿತಿಯನ್ನು ವಿವರಿಸಲು ಈ ಹೇಳಿಕೆ ಸಾಕು: ನಿನ್ನ ಮೂಗು ಉದ್ದವಾಗಿರಲು ನಿನಗೆ ಸ್ವಾತಂತ್ರ್ಯ ಇದೆ. ಆದರೆ ಅದು ನನ್ನದಕ್ಕೆ ತಾಗುವಷ್ಟಕ್ಕಿಂತ ಹೆಚ್ಚಿರಬಾರದು.

—ಸುದ್ದಿ, ವರದಿ, ಶಿಕ್ಷಣ— ಇವು ಮೂರೂ ಉದ್ದೇಶ ಪತ್ರಿಕೆಯದು. ಪತ್ರಿಕೆಯ ನೀತಿಯ ಒರೆಗಲ್ಲು ದೇಶ ಮತ್ತು ಸಮಾಜ. ಪತ್ರಿಕೆ ಅತ್ಯಂತ ಪ್ರಭಾವಶಾಲಿಯಾದ ಒಂದು ಸಾಮೂಹಿಕ ಶಿಕ್ಷಣ ಮಾಧ್ಯಮ. ಆದ್ದರಿಂದ ಅದಕ್ಕೆ ಈ ಒರೆಗಲ್ಲು ಯಾವಾಗಲೂ ಇರಬೇಕಾಗುತ್ತೆ.

—ಇಷ್ಟೆಲ್ಲ ಒಳ್ಳೆಯ ಉದ್ದೇಶ, ಗುರಿ ಉಳ್ಳ ಪತ್ರಕರ್ತರಿಗೆ ಅಪಾಯ. ಅಭದ್ರತೆಗಳೂ ಇರುತ್ತವೆ. ಆದರೆ [illegible] ಗುರಿಯಿಂದ ಹಿಂದೆಗೆಯಬಾರದು. ಒಳ್ಳೆಯ ಕೆಲಸಕ್ಕೆ ಹೋರಾಟ [illegible] ಒಲವನ್ನು ಗೆದ್ದುಕೊಳ್ಳಬೇಕು.

—ಸರ್ಕಾರ ಅನಗತ್ಯ ವೈಭವ ಪ್ರದರ್ಶನಕ್ಕಾಗಿ ಅಪಾರ ಹಣವನ್ನು [illegible] ತ್ಯಾಗಮೂರ್ತಿ. [illegible] ಬಾಹುಬಲಿಯ ಮಹಾಮಸ್ತಕಾಭಿಷೇಕಕ್ಕೆ ಎಷ್ಟೊಂದು ಅನವಶ್ಯಕ! ಭಕ್ತಿ, ಧಾರ್ಮಿಕತೆಯ ಆಚರಣೆಗೆ ಎಷ್ಟು ಬೇಕೋ ಅಷ್ಟು ಸೌಲಭ್ಯ ಕಲ್ಪಿಸಬೇಕು. ಆದರೆ ಅನಗತ್ಯ ವೈಭವಕ್ಕಾಗಿ [illegible] ಮಾಡುವುದು ಅಕ್ಷಮ್ಯ.

ಸುದ್ದಿ ಸಂಗ್ರಹ

ಬಾಹುಬಲಿಯ ಪ್ರತಿಷ್ಠಾಪನೆ

ಧರ್ಮಸ್ಥಳದಲ್ಲಿ 39 ಅಡಿ ಎತ್ತರದ ಬಾಹುಬಲಿಯ ಮೂರ್ತಿಯ ಪ್ರತಿಷ್ಠಾಪನೆ ಕಾರ್ಯಕ್ರಮ ಜ. 3ರಂದು ನೆರವೇರಿತು.

ವಿಖ್ಯಾತ ಶಿಲ್ಪಿ ರೆಂಜಾಳ ಗೋಪಾಲ ಶೆಣೈ ಅವರು ಒಂದೇ ಕಲ್ಲಿನಿಂದ ಕೆತ್ತಿದ ಈ ಮೂರ್ತಿಯನ್ನು ಕಾರ್ಕಳದ ಸಮೀಪದಿಂದ ಧರ್ಮಸ್ಥಳಕ್ಕೆ ಸಾಗಿಸಲಾಗಿತ್ತು.

ಪ್ರತಿಷ್ಠಾಪನೆ ಮತ್ತು ಮಸ್ತಕಾಭಿಷೇಕದ ವೈಭವವನ್ನು ಲಕ್ಷಾಂತರ ಜನ ನೋಡಿ ತಣಿದರು.

ರ್‍ಯಾಗಿಂಗ್ ತಡೆಗೆ ಕ್ರಮ

ಶಿಕ್ಷಣ ರಂಗದಲ್ಲಿ, ಮುಖ್ಯವಾಗಿ ವೈದ್ಯಕೀಯ ಮತ್ತು ಇಂಜನಿಯರಿಂಗ್ ಕಾಲೇಜು ಮತ್ತು ಹಾಸ್ಟಲುಗಳಲ್ಲಿ ವ್ಯಾಪಕವಾಗಿ ಹಬ್ಬಿರುವ ರ್‍ಯಾಗಿಂಗ್ ಪ್ರವೃತ್ತಿಯನ್ನು ತಡೆಯುವುದಕ್ಕಾಗಿ ಉಗ್ರಕ್ರಮ ಕೈಗೊಳ್ಳಲು ಸರ್ಕಾರ ಉದ್ದೇಶಿಸಿದೆ.

ಹಿರಿಯ ವಿದ್ಯಾರ್ಥಿಗಳು ಕಿರಿಯರನ್ನು ಪೀಡಿಸಿ, ಕೆಲವೊಮ್ಮೆ ಅಮಾನುಷ ರೀತಿಯ ಹಿಂಸೆಗೊಳಪಡಿಸಿ, ಖುಷಿ ಪಡುವ ಹವ್ಯಾಸ ರ್‍ಯಾಗಿಂಗ್.

ಈ ದುಷ್ಟ ಪ್ರವೃತ್ತಿ ಈಗ ಎಲ್ಲ ಶಿಕ್ಷಣ ಸಂಸ್ಥೆಗಳಿಗೂ ಹಬ್ಬುತ್ತಿದ್ದು ಇತ್ತೀಚೆಗೆ ಇದರ ಹಿಂಸೆಯನ್ನು ತಾಳಲಾರದೆ ದಾವಣಗೆರೆಯ ಒಬ್ಬ ವಿದ್ಯಾರ್ಥಿ ಆತ್ಮ ಹತ್ಯೆ ಮಾಡಿಕೊಂಡಂಥ ಪ್ರಕರಣಗಳ ಹಿನ್ನೆಲೆಯಲ್ಲಿ ಸರ್ಕಾರ ಈ ನಿರ್ಧಾರ ಕೈಗೊಂಡಿದೆ.

ಸದ್ಯಕ್ಕೆ ದಾವಣಗೆರೆಯ ಮೆಡಿಕಲ್ ಕಾಲೇಜ್ ವಿದ್ಯಾರ್ಥಿಗಳಿಂದ ಸದ್ವರ್ತನೆಯ ಮುಚ್ಚಳಿಕೆ ಪಡೆಯುವುದು, ಅವರ ಪಠ್ಯೇತರ ಚಟುವಟಿಕೆಗಳ ಮೇಲೂ ಕಣ್ಣಿಡುವುದು, ಮುಂತಾದ ಕ್ರಮಗಳನ್ನು ತೆಗೆದುಕೊಂಡು ನಂತರ ಅವನ್ನು ರಾಜ್ಯದ ಎಲ್ಲ ತಾಂತ್ರಿಕ ಮತ್ತು ವೈದ್ಯಕೀಯ ಕಾಲೇಜುಗಳಿಗೂ ವಿಸ್ತರಿಸಲಾಗುವುದು.

ಅಂಚೆ-ತಂತಿ ದರ ಏರಿಕೆ

ಮನಿ ಆರ್ಡರ್, ರಿಜಿಸ್ಟ್ರೇಶನ್, ಟೆಲಿಗ್ರಾಂ ದರಗಳು, ಟೆಲಿಫೋನ್ ಬಾಡಿಗೆ, ಟೆಲಿಪ್ರಿಂಟರ್ ಶುಲ್ಕ ಇವು ಮಾರ್ಚ್ 1 ರಿಂದ ತೀವ್ರವಾಗಿ ಏರಲಿವೆ.

ರಿಜಿಸ್ಟ್ರೇಶನ್‌ನ ಕನಿಷ್ಠ ದರ 2-25ರಿಂದ 2-75ಕ್ಕೆ ಹೆಚ್ಚುವುದು. ಮನಿಆರ್ಡರ್ ಶುಲ್ಕ ಇನ್ನುಮುಂದೆ ಪ್ರತಿ ಹತ್ತು ರೂ.ಗೆ 30 ಪೈಸೆ ಆಗುತ್ತದೆ. ಈ ವರೆಗೆ 10 ರೂ.ಗೆ 25 ಪೈಸೆ. 20 ರೂ.ಗೆ 50 ಪೈಸೆ, ಅನಂತರ ಪ್ರತಿ 20 ರೂ.ಗೆ 50 ಪೈಸೆ ಆಗುತ್ತಿತ್ತು. (ಅಂದರೆ 100 ರೂ. ಕಳಿಸಿದರೆ 2.50 ಆಗುತ್ತಿದ್ದುದು ಇನ್ನು ಮೇಲೆ 3 ರೂ. ಆಗಲಿದೆ.)

ಟೆಲಿಗ್ರಾಂ ಕನಿಷ್ಠ ದರ 2-25ರಿಂದ 3 ರೂ.ಗೆ ಏರಲಿದೆ. ಅನಂತರದ ಪ್ರತಿ ಪದಕ್ಕೆ ಈಗಿನ 30 ಪೈಸೆಗೆ ಬದಲು 50 ಪೈಸೆ ಬೀಳುತ್ತದೆ.

ಬಿಲ್ಲ, ರಂಗ ಗಲ್ಲಿಗೇರಿದರು

ಮೂರೂವರೆ ವರ್ಷಗಳ ಹಿಂದೆ ಚೋಪ್ರಾ ಮಕ್ಕಳ ಕೊಲೆ ಮಾಡಿ ಗಲ್ಲು ಶಿಕ್ಷೆ ಎದುರಿಸುತ್ತಿದ್ದ ಬಿಲ್ಲ ಮತ್ತು ರಂಗ ಜ. 31ರಂದು ಗಲ್ಲಿಗೇರಿದರು.

ಇವರಿಬ್ಬರ ಕ್ಷಮಾಯಾಚನೆಯನ್ನು ರಾಷ್ಟ್ರಪತಿಗಳು ತಿರಸ್ಕರಿಸಿದ್ದರು. ಅನಂತರ ಹಾಗೆ ತಿರಸ್ಕರಿಸುವಲ್ಲಿ ರಾಷ್ಟ್ರಾಧ್ಯಕ್ಷರಿಗೆ ಇರುವ ಅಧಿಕಾರದ ಸಂವಿಧಾನಬದ್ಧತೆಯನ್ನು ಪ್ರಶ್ನಿಸಿ ರಂಗ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ವಿಚಾರಣೆಗೆ ಅಂಗೀಕರಿಸಿದ ಸುಪ್ರೀಂ ಕೋರ್ಟು ದೇಶಾದ್ಯಂತ ಮರಣ ದಂಡನೆ ಆಜ್ಞೆ ಜಾರಿಗೆ ನ. 7ರಂದು ತಡೆಯಾಜ್ಞೆ ನೀಡಿತ್ತು; ಮತ್ತು ಜ. 20ರಂದು ಅದನ್ನು ತೆರವು ಮಾಡಿತ್ತು.

ಕಮ್ಮರಡಿಯಲ್ಲಿ ದೂರವಾಣಿ ಕೇಂದ್ರ ಪ್ರಾರಂಭ

ಕಮ್ಮರಡಿ: ಇಲ್ಲಿನ 25 ಲೈನ್‌ಗಳ ಸ್ವಯಂ ಚಾಲಿತ ದೂರವಾಣಿ ಕೇಂದ್ರದ ಉದ್ಘಾಟನೆ ಜ. 31 ರಂದು ಕೊಪ್ಪ ತಹಸೀಲ್ದಾರ್ ಹೆಚ್. ಎಂ. ನಾಗಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಉದ್ಘಾಟನೆ ನೆರವೇರಿಸಿದ ಮಂಗಳೂರು ಏರಿಯಾ ಟೆಲಿಕಾಂ ಡೈರೆಕ್ಟರ್ ವಿ. ನಟರಾಜನ್ ಅವರು, ಈ ಪ್ರದೇಶದಲ್ಲಿ ದೂರವಾಣಿ ಸೌಲಭ್ಯವನ್ನು ಉತ್ತಮ ಪಡಿಸಲು ಕ್ರಮ ತೆಗೆದುಕೊಳ್ಳುವ ಭರವಸೆ ನೀಡಿದರು.

ದೂರವಾಣಿ ಒಂದು ವಿಶೇಷ ಸೌಲಭ್ಯ. ಇದು ಎಲ್ಲರಿಗೂ ಸಿಗುವಂಥದ್ದಲ್ಲ. ಹಾಗಿರುವಾಗ ದೊರಕಿರುವ ಸೌಲಭ್ಯದ ಅತ್ಯುತ್ತಮ ಉಪಯೋಗ ಪಡೆದುಕೊಳ್ಳಬೇಕು ಎಂದ ಅವರು, ಬಳಕೆದಾರರು ಮತ್ತು ಇಲಾಖೆಯ ಸಿಬ್ಬಂದಿಯ ನಡುವೆ ಸಾಮರಸ್ಯ ಇರಬೇಕಾದ ಅಗತ್ಯವನ್ನು ಕುರಿತು ಕೆಲವು ಕಿವಿಮಾತು ಹೇಳಿದರು.

ಮುಖ್ಯ ಅತಿಥಿಗಳಾಗಿದ್ದ ಶಿವಮೊಗ್ಗ ಟೆಲಿ ಸಂಪರ್ಕ ವಿಭಾಗ ಇಂಜನಿಯರ್ ಬಿ. ವಿ. ಹೆಗ್ಡೆ, ಯಾವುದೇ ಊರಿನಲ್ಲಿ ಕನಿಷ್ಠ ಹತ್ತು ಜನ ದೂರವಾಣಿ ಸಂಪರ್ಕ ಪಡೆಯಲು ಮುಂದೆ ಬಂದರೆ ಅಲ್ಲಿಗೆ ಒಂದು ಸ್ವಯಂ ಚಾಲಿತ ದೂರವಾಣಿ ಕೇಂದ್ರ ಒದಗಿಸುವುದಾಗಿ ತಿಳಿಸಿದರು.

ಶಿವಮೊಗ್ಗ ಟೆಲಿ ಸಂಪರ್ಕ ಉಪವಿಭಾಗಾಧಿಕಾರಿ ಶಿವಸ್ವಾಮಿ, ಕೊಪ್ಪ ಗ್ರೂಪ್ಸ್ ಜೂ|| ಇಂಜನಿಯರ್ ಎ. ಒ. ಭಾಸ್ಕರ್ ಅವರೂ ಮುಖ್ಯ ಅತಿಥಿಗಳಾಗಿದ್ದರು.

ಚಾವಲಮನೆ ಮತ್ತು ಸುತ್ತ ಮುತ್ತಲ ಗ್ರಾಮ ಪಂಚಾಯ್ತಿಗಳವರು ಸಮಾರಂಭ ಏರ್ಪಡಿಸಿದ್ದರು. ಕೃಷ್ಣಪ್ಪಗೌಡ ಸ್ವಾಗತಿಸಿದರು. ಜೋಯ್ಸ್ ವಂದಿಸಿದರು.

ಕಿಗ್ಗದಲ್ಲಿ ಗ್ರಾಮಸಭೆ

ಕಿಗ್ಗ: ಮರ್ಕಲ್ ಗ್ರಾಮಪಂಚಾಯ್ತಿಯ 1980-81ರ ವಾರ್ಷಿಕ ಮಹಾಸಭೆ ಜ. 25 ರಂದು ಇಲ್ಲಿ ಪಂಚಾಯ್ತಿ ಅಧ್ಯಕ್ಷ ಕೆ.ಪಿ. ಪ್ರೇಮನಾಥರ ಅಧ್ಯಕ್ಷತೆಯಲ್ಲಿ ನಡೆಯಿತು.

ಮುಖ್ಯ ಅತಿಥಿಗಳಾಗಿದ್ದ ಕೆ. ಬಿ. ಲಿಂಗಪ್ಪ ನಾಯ್ಕರು ಗ್ರಾಮ ಸಭೆಗೆ ಬರಬೇಕಾದ್ದು ಗ್ರಾಮದ ಎಲ್ಲಾ ನಾಗರೀಕರ ಕರ್ತವ್ಯ ಎಂದು ಹೇಳಿ, ಪಂಚಾಯ್ತಿಗಳು ಅಂಗೀಕರಿಸುವ ನಿರ್ಣಯಗಳಿಗೆ, ಮಂಡಿಸುವ ಅಭಿಪ್ರಾಯಗಳಿಗೆ ಸರ್ಕಾರದಿಂದ ಬೆಲೆಯಿಲ್ಲದಿರುವ ಬಗ್ಗೆ ವಿಷಾದಿಸಿದರು.

ಶಾಲಾ ಮುಖ್ಯೋಪಾಧ್ಯಾಯ ಚಿನ್ನಪ್ಪ, ಪಂಚಾಯಿತಿ ವಿಸ್ತರಣಾಧಿಕಾರಿ ದುಗ್ಗಪ್ಪ, ಎಚ್. ಗುಂಡಣ್ಣ ಹೆಗ್ಡೆ, ಬಿ.ಕೆ. ಶೇಷಗಿರಿಯಪ್ಪ ಮುಂತಾದವರು ಸಭೆಯಲ್ಲಿ ಮಾತನಾಡಿದರು.

ಬಾವಿ ಪಕ್ಕದಲ್ಲೇ ಕೊಳವೆಬಾವಿ ನಿರ್ಮಾಣ, ಸಿರಿಮನೆ–ಚಟ್ನಮನೆ ರಸ್ತೆಯಲ್ಲಿ ಮೋರಿಕಾಮಗಾರಿಯಲ್ಲಿ ಅನ್ಯಾಯ ಇವುಗಳಿಂದ ಸರ್ಕಾರದ ಹಣ ಪೋಲಾಗುತ್ತಿರುವುದು, ವಿದ್ಯುತ್ ಮಂಡಲಿಯ ನಿರುತ್ಸಾಹ, ಗಾಡಿ ಕಂದಾಯ ಮುಂತಾದ ಸಮಸ್ಯೆಗಳ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಿತು.

ಗ್ರಾಮಸ್ಥರು ಸಭೆಯಲ್ಲಿ ಆಸಕ್ತಿಯಿಂದ ಅಮೂಲ್ಯ ಸಲಹೆಗಳನ್ನು ಕೊಟ್ಟಿದ್ದಕ್ಕೆ ವಂದನೆ ಸಲ್ಲಿಸಿದ ಪ್ರೇಮನಾಥ್ ಅವುಗಳನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನಿಸುವುದಾಗಿ ತಿಳಿಸಿದರು.

ಮಹಮದ್ ಇಸ್ಮಾಯಿಲ್ ನಿಧನ

ಕೊಪ್ಪ: ಇಲ್ಲಿನ ಪುರಸಭೆಯ ನೀರು ಸರಬರಾಜು ವಿಭಾಗದಲ್ಲಿ ಸುಮಾರು 30 ವರ್ಷ ಸೇವೆ ಸಲ್ಲಿಸಿ 10 ವರ್ಷದ ಹಿಂದೆ ನಿವೃತ್ತರಾಗಿದ್ದು, ಕೊಪ್ಪದ ಜನರಿಗೆ 'ನಲ್ಲಿ ಸಾಬರು' ಎಂದೇ ಪರಿಚಿತರಾಗಿದ್ದ ಮಹಮದ್ ಇಸ್ಮಾಯಿಲ್ ಫೆ. 2ರಂದು ಹೃದಯಾಘಾತದಿಂದ ನಿಧನರಾದರು. ಅವರಿಗೆ 65 ವರ್ಷ ವಯಸ್ಸಾಗಿತ್ತು.

ಅವರ ಮರಣದ ಸುದ್ದಿ ತಿಳಿದೊಡನೆ ಪುರಸಭೆ ಕಚೇರಿಯ ಸಿಬ್ಬಂದಿ ಸಂತಾಪ ಸೂಚಕ ಸಭೆ ನಡೆಸಿದರು. ನಂತರ ಅವರ ಮನೆಗೆ ಹೋಗಿ, ಶವಕ್ಕೆ ಹೂಹಾರ ಅರ್ಪಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಿದರು.

ಮರುದಿನ ನಡೆದ ಮೃತರ ಅಂತ್ಯಕ್ರಿಯೆ ಸಂದರ್ಭದಲ್ಲಿ ಅವರ ಅಪಾರ ನೆಂಟರಿಷ್ಟರಲ್ಲದೆ ಊರಿನ ಹಲವಾರು ಜನರೂ ಹಾಜರಿದ್ದರು.

ಇದೇ ಸಂದರ್ಭದಲ್ಲಿ ಹರಿಜನರಿಗೆ ಕೊಡತಪಾನಗಳನ್ನು ಹಂಚಲಾಯಿತು.

ಹೆಚ್. ವಿ. ಶಿವಪ್ಪ ಸ್ವಾಗತಿಸಿದರು. ಕೃಷ್ಣಾಚಾರ್ ವಂದಿಸಿದರು.

ತಾ|| ಯುವಜನ ಮೇಳದಲ್ಲಿ ಕಿಗ್ಗದ ಮಹಿಳಾಸಮಾಜಕ್ಕೆ ಪ್ರಶಸ್ತಿಗಳು

ಕಿಗ್ಗ: ಜ. 27 ಮತ್ತು 28ರಂದು ಅಡ್ಡಗದ್ದೆಯಲ್ಲಿ ನಡೆದ ಶೃಂಗೇರಿ ತಾ|| ಯುವಜನ ಮೇಳದಲ್ಲಿ ಕಿಗ್ಗದ ಶಾಂತಾ ಮಹಿಳಾ ಸಮಾಜ ಭಾಗವಹಿಸಿ ಹಲವಾರು ಬಹುಮಾನಗಳನ್ನು ಪಡೆದಿರುವುದಾಗಿ ಸಮಾಜದ ವಕ್ತಾರರೊಬ್ಬರು ತಿಳಿಸಿದ್ದಾರೆ.

ಕೊಪ್ಪ ಕಿರಿಯ ಕಾಲೇಜಿನ ವಾರ್ಷಿಕೋತ್ಸವ

ಕೊಪ್ಪ: ಇಲ್ಲಿನ ಸರ್ಕಾರಿ ಕಿರಿಯ ಕಾಲೇಜಿನ ವಿದ್ಯಾರ್ಥಿಸಂಘದ ವಾರ್ಷಿಕೋತ್ಸವ ಫೆ. 3 ಮತ್ತು 4ರಂದು ನಡೆಯಿತು.

3ರಂದು ನಡೆದ ಸಮಾರಂಭದ ಅಧ್ಯಕ್ಷತೆಯನ್ನು ಹರಿಹರಪುರ ವೈದ್ಯಾಧಿಕಾರಿ ಸಿ. ಸಿದ್ದಯ್ಯ ವಹಿಸಿದ್ದರು. ಮುಖ್ಯ ಅತಿಥಿಗಳಾಗಿದ್ದ ಶೃಂಗೇರಿ ಕಾಲೇಜಿನ ಪ್ರಾಚಾರ್ಯರಾದ ಎಂ. ಕೃಷ್ಣಪ್ಪಯ್ಯನವರು ಸಮಯೋಚಿತವಾಗಿ ವಿದ್ಯಾರ್ಥಿಗಳಿಗೆ ಹಿತವಚನಗಳನ್ನು ಹೇಳಿದರು. ಇಲ್ಲಿನ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಪುಟ್ಟಸ್ವಾಮಿಗೌಡ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ ಮಾಡಿದರು.

ಕಾಲೇಜಿನ ಪ್ರಾಚಾರ್ಯ ಕೆ. ಎಸ್. ನಾರಾಯಣಸ್ವಾಮಿ ಸ್ವಾಗತಿಸಿದರು. ಉಪಾಧ್ಯಾಯ ಕಾರ್ಯದರ್ಶಿ ಡಿ. ವಿ. ಚಂದ್ರಶೇಖರ್ ವಂದಿಸಿದರು.

ಫೆ. 4ರಂದು ಹರಿಹರಪುರ ಜೂನಿಯರ್ ಕಾಲೇಜಿನ ಪ್ರಾಚಾರ್ಯ ಬಿ. ಎನ್ ಸತ್ಯನಾರಾಯಣ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಇಲ್ಲಿನ ನಿವೃತ್ತ ಶಿಕ್ಷಕರಾದ ವಿದ್ವಾನ್ ಕೆ. ಎಸ್. ಸೀತಾರಾಮ ಭಟ್ಟರು ಮುಖ್ಯ ಅತಿಥಿಗಳಾಗಿದ್ದರು. ಮೈಸೂರು ಬ್ಯಾಂಕಿನ ಕೊಪ್ಪ ಶಾಖೆಯ ಮ್ಯಾನೇಜರ್ ಎಂ. ಎನ್. ಆಚಾರ್ಯ ಆಟೋಟಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ ಮಾಡಿದರು.

ಪ್ರಾರಂಭದಲ್ಲಿ ಕಾಲೇಜಿನ ಪ್ರಾಚಾರ್ಯರು ಸ್ವಾಗತಿಸಿದರು. ವಾರ್ಷಿಕ ಕ್ರೀಡಾ ವರದಿಯನ್ನು ಆರ್. ನಂಜುಂಡಪ್ಪ ಓದಿದರು. ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಜಯದೇವಪ್ಪ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಉಪಾಧ್ಯಾಯ ಕಾರ್ಯದರ್ಶಿ ಎಸ್. ಎಸ್. ವಿಶ್ವೇಶ್ವರ್ ವಂದಿಸಿದರು.

ಪ್ರತಿವರ್ಷದಂತೆ ಈ ವರ್ಷವೂ ಸ್ಥಳೀಯ ಕಾಫಿ ಬೆಳೆಗಾರರಾದ ವಸಂತ ಅಜಿಲರು ಎರಡು ಛಾಂಪಿಯನ್ ಶಿಪ್ ಬಹುಮಾನಗಳನ್ನು ನೀಡಿದ್ದರು.

ಇದೇ ಸಂದರ್ಭದಲ್ಲಿ ಕಾಲೇಜಿನ ನಿವೃತ್ತ ಶಿಕ್ಷಕ, ಕವಿ ವಿ. ಎಂ. ಮುತ್ತಯ್ಯ ಅವರನ್ನು ಕಾಲೇಜು ಸಿಬ್ಬಂದಿವರ್ಗದವರು ಸನ್ಮಾನಿಸಿದರು.

ಎರಡು ದಿನವೂ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಂದ ವಿವಿಧ ಮನರಂಜನಾ ಕಾರ್ಯಕ್ರಮ ಮತ್ತು ನಾಟಕಗಳನ್ನು ಏರ್ಪಡಿಸಲಾಗಿತ್ತು.

ಸಂಪಾದಕ, ಪ್ರಕಾಶಕ ಮತ್ತು ಮುದ್ರಕ: ಸಿರಿಮನೆ ನಾಗರಾಜ್. ಅಚ್ಚು: ನೇಸರ ಮುದ್ರಣ, ಕೊಪ್ಪ.